The Resource Centre

Press Clipping

Publication : **Udayavani**

Date : **May 13, 2016**

Edition : **State**

Page : **3**

ನಿರುತ್ತರ ಕುರಿತು ಪ್ರಶ್ನೋತ್ತರ

ಭಾವನಾ ಮರುತ್ತರ

■ ರಾಜೇಶ್ ಶೆಟ್ಟಿ

ಭಾವನಾ ನಿರ್ಮಾಣ.
ಅಪೂರ್ವ ಶಾಸರವಳ್ಳಿ ನಿರ್ದೇಶನ.
ರಾಹುಲ್ ಬೋಸ್ ನಟನೆ.

ಇಷ್ಟೆಲ್ಲಾ ಪಾಸಿಟಿವ್ ಪಾಯಿಂಟ್‌ಗಳೇ ಇದ್ದ 'ನಿರುತ್ತರ' ಸಿನಿಮಾ ಕುರುವಾಗಿದ್ದು ಗೊತ್ತಾಗಿತ್ತು. ಆದರೆ, ಆಮೇಲೆ ಸುದ್ದಿ ಇರಲಿಲ್ಲ. ಏನಾಯಿತು, ಚಿತ್ರತಂಡದವರು ಎಲ್ಲಿದ್ದಾರೆ,ಹೇಗಿದ್ದಾರೆ ಎಂಬಿತ್ಯಾದಿ ಯಾವ ಮಾಹಿತಿಗಳೂ ಇರಲಿಲ್ಲ. ಚಿತ್ರತಂಡದವರು ಯಾರೂ ಉಭಯಕುಶಲೋಪರಿಗೆ ಸಿಕ್ಕಿರಲಿಲ್ಲ. ಹಾಗಾಗಿಯೇ ಇತ್ತೀಚೆಗೆ ಚಿತ್ರತಂಡ ಒಟ್ಟಿಗೆ ಸೇರಿ ಚಿತ್ರದ ಬಗ್ಗೆ ನಾಲ್ಕು ಮಾತಾಡಿತು.

ಮೊದಲಿಗೆ ಮಾತಾಡಿದ್ದು ಭಾವನಾ. ಅಂದಹಾಗೆ ಇದು ಅವರು ನಿರ್ಮಿಸುತ್ತಿರುವ ಮೊದಲ ಸಿನಿಮಾ. 'ನಾನು ಮತ್ತು ತಮ್ಮ ಅರವಿಂದ್ ರಾಮಣ್ಣ ನಮ್ಮ ಪೊಡಕ್ಷನ್ ಹೌಸ್‌ನಲ್ಲಿ ಒಳ್ಳೆಯ ಸಿನಿಮಾ ಮಾಡಬೇಕು ಅಂತಂದುಕೊಂಡಿದ್ವಿ. ಆಗಲೇ ವಿಕ್ರಮ್ ಹತ್ವಾರ್ ಕತೆ ಕೊಟ್ಟರು. ಅಪೂರ್ವ ನಿರ್ದೇಶನ ಮಾಡಲು ಒಪ್ಪಿಕೊಂಡರು. ಸಿನಿಮಾಟೋಗ್ರಾಫರ್ ರಾಮಚಂದ್ರ, ರಾಹುಲ್ ಬೋಸ್, ಐಂದ್ರಿತಾ ರೇ, ಕಿರಣ್ ಶ್ರೀನಿವಾಸ್ ಎಲ್ಲಾ ಜೊತೆಯಾದರು. ನಿರುತ್ತರ ಜರ್ನಿ ಶುರುವಾಯಿತು. ಈಗ ಅಂತಿಮ ಹಂತಕ್ಕೆ ಬಂದು ತಲುಪಿದ್ದೇವೆ. ಒಂದೊಳ್ಳೆ ಸಿನಿಮಾ ಮಾಡಿದ ಖುಷಿಯಿದೆ. ನನಗೆ ಈ ಸಿನಿಮಾದಲ್ಲಿ ಮಧ್ಯ ವಯಸ್ಕ ಮಹಿಳೆಯ ಪಾತ್ರ. ಮೊದಲಿರಡು ದಿನ ಪಾತ್ರವಾಗಲು ಕಷ್ಟವಾಯಿತು. ಆಮೇಲೆ ಪಾತ್ರ ಅರ್ಥವಾದ ಮೇಲೆ ಪಾತ್ರವಾಗಿ ಬದಲಾದೆ. ಈ ಸಿನಿಮಾದಲ್ಲಿ ಸಂಗೀತವೇ ಪ್ರಧಾನವಾಗಿದೆ.'

ಈ ಮಾತಿಗೆ ಒಂದೇ ವಾಕ್ಯದ ಮಾತು ಸೇರಿಸಿದ್ದು ಅರವಿಂದ್ ರಾಮಣ್ಣ. 'ನನಗೆ ನೋಡಬೇಕು ಅಂತನ್ನುವ ಸಿನಿಮಾ ಮಾಡಬೇಕು ಅನ್ನೋ ಆಸೆ ಇತ್ತು. ಅದೇ ಥರ ಸಿನಿಮಾ ಮಾಡಿದ್ದೇವೆ.'

ನಿರ್ದೇಶಕ ಅಪೂರ್ವ ಕಾಸರವಳ್ಳಿಯವರಿಗೂ ಪ್ರಥಮ ನಿರ್ದೇಶಕರಾಗಿ ಇದು ಮೊದಲ ಸಿನಿಮಾ. ಏನು ಮಾತಾಡಬೇಕು ಅಂತಲೇ ಮಾತು ಕುರು[illegible] ಸಿನಿಮಾ ಬಗ್ಗೆ ತಿಳಿಸಿಕೊಂಡರು. [illegible] ಭಾವನಾ [illegible] ಸಂಗೀತಕಾರ ನೀಲಾದ್ರಿ ಕುಮಾರ್ ಸಂಗೀತ ಈ ಚಿತ್ರಕ್ಕಿದೆ. ಹಾಡುಗಳೇ ಅಲ್ಲಿ ಭಾವವಾಗಿವೆ.'

ಆದಕ್ಕೆ ಪೂರಕವಾಗಿ ಕವಿರಾಜ್ 'ಈ ಸಿನಿಮಾದಲ್ಲಿ ನನಗೆ ಸಾಹಿತಿಯಾಗಿ ಪ್ರಕಟಗೊಳ್ಳುವ ಅವಕಾಶ ಸಿಕ್ಕಿದೆ. ಇದೊಂದು ವಿಭಿನ್ನ ಸಿನಿಮಾ. ನಮ್ಮ ಸಂಗೀತ ನಿರ್ದೇಶಕರು ಶಾಸ್ತ್ರೀಯ ಸಂಗೀತ ಹಿನ್ನೆಲೆಯವರು. ಹಾಗಾಗಿ ಬೇಡಿಯದೇ ಥರದ ಹಾಡುಗಳವೆ ಇಲ್ಲಿ' ಎಂದರು.

ಅವರ ಜೊತೆಗೆ ಕಿರಣ್ ಶ್ರೀನಿವಾಸ್ ಮತ್ತು ಐಂದ್ರಿತಾ ರೇ ಇದ್ದರು. ಕಿರಣ್ ತುಂಬಾ ಸಮಯದಿಂದ ಮುಂಬೈಯಲ್ಲೇ ಇದ್ದವರು. ಈ ಸಿನಿಮಾ ಮೂಲಕ ಮತ್ತೆ ಕನ್ನಡ ಚಿತ್ರರಂಗಕ್ಕೆ ಬಂದಿದ್ದಾರೆ. ಅವರು ಹೇಳೋದು ಇಷ್ಟು- 'ಹಾಲಿವುಡ್‌ನಲ್ಲಿ ಒಂದು ಮಾತಿದೆ. ಕಂಟೆಂಟ್ ಇಸ್ ದಿ ಕಿಂಗ್ ಅಂತ. ಅದೇ ಥರದ ಸಿನಿಮಾ ಇದು. ನನಗೆ ಈ ಸಿನಿಮಾ ಮಾಡಿ ತುಂಬಾ ತೃಪ್ತಿ ಸಿಕ್ಕಿದೆ'ಎಂದು ಖುಷಿಪಟ್ಟರು.

ಐಂದ್ರಿತಾ ರೇ ಕೂಡ ಈ ಸಿನಿಮಾದ ಬಗ್ಗೆ ತುಂಬಾ ಆಪ್ತವಾಗಿ ಮಾತಾಡಿದರು. 'ತುಂಬಾ ವಿಭಿನ್ನ ಸಿನಿಮಾ ಇದು. ತುಂಬಾ ಪ್ರೀತಿಯಿಂದ ಮಾಡಿದ್ದೇವೆ.

ನಿರ್ಮಾಪಕರಂತೂ ತುಂಬಾ ಒಳ್ಳೆಯವರು. ನಿರ್ಮಾಪಕರಿಂದ ನಾವು ಬಯಸೋದು ಎರಡು. ಒಂದು ಕೆಲಸದಲ್ಲಿ ಇಂಟರ್‌ಫಿಯರ್ ಆಗಬಾರದು. ಇನ್ನೊಂದು ಸಂಭಾವನೆ ಕರೆಕ್ಟಾಗಿ ಕೊಡಬೇಕು. ನಮ್ಮ ನಿರ್ಮಾಪಕರು ತುಂಬಾ ಒಳ್ಳೆಯವರು'.

ಇಷ್ಟೆಲ್ಲಾ ಮಾತುಕತೆಯಾದ ನಂತರ ಸಿನಿಮಾದ ಪೋಸ್ಟರ್ ಕೂಡ ಬಿಡುಗಡೆಯಾಯಿತು. ಭಾವನಾ ಇದೇ ತಿಂಗಳ 18ನೇ ತಾರೀಕಿಗೆ ಆಡಿಯೋ ಬಿಡುಗಡೆ ನಡೆಯಲಿದೆ ಅಂತ ಘೋಷಿಸಿದರು. ನೀಲಾದ್ರಿ ಕುಮಾರ್ ಸಂಗೀತವನ್ನು ಕೇಳಿ ಖುಷಿ ಪಡುತ್ತೀರಿ ಎಂದರು. ಸಂಗೀತ ಪ್ರೇಮಿಗಳು 18ರವರೆಗೆ ಕಾಯಬೇಕು. ■